ಕ್ಯಾಮೆರಾ ಪ್ರೇಮ

ಹುಟ್ಟಿದಾರಭ್ಯ ನಾನೆಂದೂ ಕಾಣದ ಸ್ಟುಡಿಯೋ ಎಂಬ ಮಾಯಾಮಂದಿರದಲ್ಲಿ ನಾವು ಮೂವರು ಗೆಳತಿಯರು ಇದ್ದುದರಲ್ಲೇ ಹೊಸದಾದ ಉದ್ದ ಲಂಗ, ರವಿಕೆ ಧರಿಸಿ, ತಲೆಗೆ ಚೆನ್ನಾಗಿ ಎಣ್ಣೆ ಹಚ್ಚಿಕೊಂಡು ನಮಗೆ ತಿಳಿದಂತೆಯೇ ಇದ್ದುದರಲ್ಲಿ ಸ್ವಲ್ಪ ಕಡಿಮೆಯೇ ಸೊಟ್ಟಪಟ್ಟಾದ ಎರಡು ಜಡೆ ಹೆಣೆದು, ಹೂ ಮುಡಿದುಕೊಂಡು ನಿಂತೆವು.

ಪ್ರಭಾಮಣಿ ನಾಗರಾಜ

ನಮ್ಮ ಹಳೆಯ ಮನೆಯ ಗೋಡೆಗಳ ಮೇಲೆ ಮುಕ್ಕೋಟಿ ದೇವತೆಗಳ ಒಂದಿಲ್ಲಾ ಒಂದು ಪಟಗಳು ಇದ್ದವು. ಆದರೆ ನರಮನುಷ್ಯರ ಫೋಟೋ ಒಂದೂ ಇರಲಿಲ್ಲ. ಹಾಗಾಗಿ ನಾನು ಹುಟ್ಟುವ ಮೊದಲೇ ಹರನ ಪಾದಾರವಿಂದ ಸೇರಿದ ಕುಟುಂಬದ ಹಿರಿಯರನ್ನು ಎಂದಿಗೂ ದೃಶ್ಯರೂಪದಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಏನಿದ್ದರೂ ಅವರ ಬಾಹ್ಯ ರೂಪದ ವರ್ಣನೆಗಳ ಆಧಾರದ ಮೇಲೆ ಮಸಕುಮಸಕು ಚಿತ್ರಗಳು ಮನಃಪಟಲದಲ್ಲಿ ಮೂಡಿ ಮಾಯವಾಗುತ್ತಿದ್ದವು. ನಮ್ಮ ಸೋದರತ್ತೆ ತಮ್ಮ ತಂದೆಯನ್ನು ಅತ್ಯಂತ ಅಭಿಮಾನದಿಂದ ವರ್ಣಿಸುತ್ತಾ ಅವರ ಚಿತ್ರವನ್ನು ನಮ್ಮ ಚಿತ್ತದಲ್ಲಿ ಹಚ್ಚ ಹಸಿರಾಗೇ ಉಳಿಸಿದ್ದರು.

'ಆಹಾ ನಮ್ಮಪ್ಪನ ರೂಪವೇ ರೂಪ. ಎಳೆದಿಟ್ಟ ಸ್ಪ್ರಿಂಗಿನಂಥಾ ಬಿಗಿದ ತುಟಿಗಳು, ಗರುಡಪಕ್ಷಿ ಕೊಕ್ಕಿನಹಾಗೆ ಎತ್ತರವಾಗಿ ಬಾಗಿದ್ದ ಮೂಗು, ಕಮಲದಂಥಾ ಕಣ್ಣುಗಳು, ಉಬ್ಬಿದ ವಿಶಾಲ ಹಣೆ, ಕೊಬ್ಬರಿ ಗಿಟುಕಿನಂಥಾ ಕಿವಿಗಳು...' ನಾನೊಬ್ಬ ಚಿತ್ರಕಾರಳಾಗಿದ್ದರೆ ಪದೇ ಪದೆ ಕೇಳಿ ನನ್ನೊಳಗೆ ಅಚ್ಚೊತ್ತಿದ ಆ ವರ್ಣನೆಯನ್ನು ಚಿತ್ರವಾಗಿಸಿಬಿಡ್ತಿದ್ದೆನೇನೋ. ಆದರೆ ನನ್ನ ದೌರ್ಭಾಗ್ಯವೋ, ಚಿತ್ರಕಲಾ ಜಗತ್ತಿನ ಸೌಭಾಗ್ಯವೋ ನನಗಂತೂ ಆ ವಿದ್ಯೆ ಸಿದ್ಧಿಸಲೇ ಇಲ್ಲ. ಆದರೆ ನಮ್ಮ ಮುಂದಿನ ಪೀಳಿಗೆಯ ಪಾಡು ನನ್ನಂತಾಗಬಾರದಲ್ಲಾ ಎಂಬ ಸದಾಶಯದಿಂದಲೋ ಏನೋ ಛಾಯಾಚಿತ್ರವನ್ನಾದರೂ ತೆಗೆಯಬೇಕೆಂಬ ಮಹದಾಸೆ ಆಗಿನಿಂದಲೇ ಕಾಡಲಾರಂಭಿಸಿತು. ಅದು ಕುಡಿಯೊಡೆದದ್ದು ಮೊದಲು ನನ್ನ ಫೋಟೋ ತೆಗೆಸಿಕೊಳ್ಳಬೇಕೆಂಬ ಹಂಬಲದಿಂದಲೇ. ಆಗೆಲ್ಲಾ ಫೋಟೋ ತೆಗೆಸಿಕೊಳ್ಳಲು ಸ್ಟುಡಿಯೋಗೇ ಹೋಗಬೇಕಿತ್ತು. ನಮ್ಮದೋ ಸಮೀಪದ ಪಟ್ಟಣಕ್ಕೆ ಬಸ್ಸಿನ ಸೌಲಭ್ಯವೂ ಇಲ್ಲದ ಕುಗ್ರಾಮ. ಮೊದಲ ಫೋಟೋ ತೆಗೆಸಿಕೊಳ್ಳಲು ನಾನು ಏಳನೇ ತರಗತಿಯ ಪಬ್ಲಿಕ್ ಪರೀಕ್ಷೆಯ ವರೆಗೂ ಕಾಯಬೇಕಾಯ್ತು. ಏಳನೇ ತರಗತಿ ಪರೀಕ್ಷೆಯ ಸೆಂಟರ್ ಐದು ಮೈಲು ದೂರದ ಪಟ್ಟಣಲ್ಲಿತ್ತು. ಪರೀಕ್ಷೆ ಬರೆಯುವುದಕ್ಕೆ ನಾವೆಲ್ಲಾ ಪಟ್ಟಣದಲ್ಲೇ ವಾಸ್ತವ್ಯ ಹೂಡಿದ್ದ ನಮ್ಮ ಹೆಡ್‌ಮಾಸ್ಟರ್ ಮನೆಯಲ್ಲೇ ಉಳಿದುಕೊಂಡಿದ್ದೆವು. ನನಗೋ ಹೇಗೂ ಪಟ್ಟಣಕ್ಕೆ ಬಂದಿದೀವಿ, ಪರೀಕ್ಷೆ ಮುಗಿದರೆ ಸಾಕು ಫೋಟೋ ತೆಗೆಸಿಕೊಳ್ಳಲೇಬೇಕೆಂಬ ಹಂಬಲ. ನಮ್ಮೊಟ್ಟಿಗೇ ಓದಲು ಬರುತ್ತಿದ್ದ ಹೆಡ್‌ಮಾಸ್ಟರ್ ಪಕ್ಕದ ಮನೆಯ ಹುಡುಗಿಯ ಸ್ನೇಹ ಸಂಪಾದಿಸಿ ಫೋಟೋ ಸ್ಟುಡಿಯೋ ಎಲ್ಲಿದೆ ಎಂದು ತಿಳಿದುಕೊಂಡು ನನ್ನ ಇಷ್ಟಕಾಮ್ಯಾರ್ಥ ಸಿದ್ಧಿಗಾಗಿ ಕಾಯಲಾರಂಭಿಸಿದೆ.

ಬಂದೇ ಬಿಟ್ಟಿತು ನನ್ನ ಚರಿತ್ರೆಯ ಪುಟಗಳಲ್ಲಿ ಅಚ್ಚಳಿಯದೆ ದಾಖಲಾಗಿರುವ ಆ ದಿನ. ಹುಟ್ಟಿದಾರಭ್ಯ ನಾನೆಂದೂ ಕಾಣದ ಸ್ಟುಡಿಯೋ ಎಂಬ ಮಾಯಾಮಂದಿರದಲ್ಲಿ ನಾವು ಮೂವರು ಗೆಳತಿಯರು ಇದ್ದುದರಲ್ಲೇ ಹೊಸದಾದ ಉದ್ದ ಲಂಗ, ರವಿಕೆ ಧರಿಸಿ, ತಲೆಗೆ ಚೆನ್ನಾಗಿ ಎಣ್ಣೆ ಹಚ್ಚಿಕೊಂಡು ನಮಗೆ ತಿಳಿದಂತೆಯೇ ಇದ್ದುದರಲ್ಲಿ ಸ್ವಲ್ಪ ಕಡಿಮೆಯೇ ಸೊಟ್ಟಪಟ್ಟಾದ ಎರಡು ಜಡೆ ಹೆಣೆದು, ಹೂ ಮುಡಿದುಕೊಂಡು ನಿಂತೆವು. ಫೋಟೋಗ್ರಾಫರ್ ಎಂಬ ಮಾಂತ್ರಿಕ ಆ ಕಾಲದ ಸ್ಟೈಲಿನಂತೆ ಎಡಗೈ ನೇರವಾಗಿಸಿ ಬಲಗೈ ಬಾಗಿಸಿ ಎಡಗೈ ಮೊಣಕೈ ಕೀಲಿನ ಮೇಲಿರಿಸಿ ಪರದೆಯ ಮುಂದೆ ಸಾಲಾಗಿ ನಿಲ್ಲಿಸಿದರು. ಎದುರಿಗಿದ್ದ ಎರಡು ಛತ್ರಿಗಳ ಅಡಿಯಿಂದ ಝಗ್ಗನೆ ಬೆಳಕು ಮೂಡಿದಂತೆ ಆ ಜಾದೂಗಾರ ಮಧ್ಯಭಾಗದ ಸ್ಟ್ಯಾಂಡ್ ಮೇಲಿದ್ದ ಕಪ್ಪು ಬಟ್ಟೆಯಡಿ ಅವಿತುಕೊಂಡು, 'ಸರಿದುಕೊಂಡು ಹತ್ತಿರಕ್ಕೆ ನಿಂತುಕೊಳ್ಳಿ, ಹಾ... ಹಾಗೇ, ರೆಡಿ, ಸ್ಮೈಲ್' ಅಂತ ಏನೇನೋ ಹೇಳ್ತಾ ಛಕ್ ಎನಿಸೇಬಿಟ್ಟರು. 'ಒಂದು ವಾರ ಬಿಟ್ಟು ಬನ್ನಿ' ಎಂದು ಹೇಳಿ ಕಳಿಸಿದರು. ಆದರೆ ಆ ಒಂದು ವಾರವೇ ನಮಗೊಂದು ವರ್ಷವೆನಿಸಿ, ಮನೆಯಲ್ಲಿ ಕಾಡಿಬೇಡಿ ಫೋಟೋ ತಂದು ನೋಡುವ ಹೊತ್ತಿಗೆ ಸಾಕುಸಾಕಾಗಿತ್ತು. ನಂತರ ನಾನು ಫೋಟೋ ತೆಗೆಸಿಕೊಂಡದ್ದು ಎಸ್‌ಎಸ್‌ಎಲ್‌ಸಿಯ ಸೆಂಡ್ ಆಫ್ ದಿನವೇ. ಅದೂ ಗ್ರೂಪ್ ಫೋಟೋ. ನನ್ನ ಈ ಅಪರೂಪದ ಫೋಟೋಗಳನ್ನು ನೋಡಿದಾಗಲೆಲ್ಲಾ ಫೋಟೋ ತೆಗೆಸಿಕೊಳ್ಳಬೇಕು ಎನ್ನುವುದರೊಟ್ಟಿಗೆ ನಾನೂ ಹೀಗೇ ಫೋಟೋ ತೆಗೀಬೇಕು ಎನ್ನುವ ಆಸೆಯೂ ಉತ್ಕಟವಾಗುತ್ತಿತ್ತು. ನಾನೇ ಫೋಟೋ ತೆಗೆಯಲು ನನ್ನದೇ ಕ್ಯಾಮೆರಾದ ಅಗತ್ಯವಿತ್ತು. ಆದರೆ ಸಾಧ್ಯತೆ?

ನಾನು ಮೊಟ್ಟಮೊದಲು ಕ್ಯಾಮೆರಾ ಸ್ಪರ್ಶಿಸುವ ಅವಕಾಶ ಸಿಕ್ಕಿದ್ದು ನಾನೆಂದೂ ಕಾಣದಿದ್ದ ಆ ಮಹಾನ್‌ನಗರದ ಕಾಲೇಜಿಗೆ ಹೋದಾಗಲೇ. ನಾನು ಮೆರಿಟ್ ಆಧಾರದ ಮೇಲೆ ಆಯ್ಕೆಯಾಗಿ ಹೋಗಿದ್ದ ರೆಸಿಡೆನ್ಷಿಯಲ್ ಕಾಲೇಜಿನಲ್ಲಿ ಫೋಟೋಗ್ರಫಿ ಕಲಿಯುವ ಅವಕಾಶವೂ ಇತ್ತು. ಫೋಟೋ ತೆಗೆಯುವುದನ್ನೇನೋ ಕಲಿತೆ. ಆದರೆ ಆಗಿನ ಟೆಕ್ನಾಲಜಿಯಂತೆ ಡಾರ್ಕ್‌ರೂಂನಲ್ಲಿ ಫೋಟೋ ವಾಶ್ ಮಾಡಿ ಪ್ರಿಂಟ್ ಹಾಕುವುದನ್ನು ಕಲಿಯಬೇಕಿತ್ತು. ಕಲಿಯಲು ನನ್ನೊಡನೆ ಯಾವ ಹೆಂಗಳೆಯರೂ ಬರಲು ಒಪ್ಪದಿದ್ದರಿಂದ ಆ ವಿದ್ಯೆ ಅಪೂರ್ಣವಾಗಿ ಕೇವಲ ಪ್ರೊಸೀಜರ್‌ಗಷ್ಟೇ ತೃಪ್ತಿಪಡಬೇಕಾಯಿತು. ಆ ಕಾಲಕ್ಕೆ ಒಬ್ಬ ಪರಿಪೂರ್ಣ ಫೋಟೋಗ್ರಾಫರ್ ಆಗುವುದರಿಂದ ವಂಚಿತಳಾದೆ. ನಾವು ಯಾವುದೇ ಪಿಕ್‌ನಿಕ್‌ಗೆ ಹೋಗುವಾಗಲೂ ಕಾಲೇಜಿನಿಂದ ಕ್ಯಾಮೆರಾ ಎರವಲು ತೆಗೆದುಕೊಂಡು ಹೋಗಬಹುದಾಗಿದ್ದುದರಿಂದ ಸ್ವಲ್ಪ ಸಮಾಧಾನ ಪಡಬಹುದಿತ್ತು. ಸ್ವಲ್ಪ ಡ್ಯಾಮೇಜಾದರೂ ಅದರ ಪೂರ್ಣ ಹಣ ಕಟ್ಟಬೇಕಿತ್ತು. ಆದರೆ ಕ್ಯಾಮೆರಾ ಮೇಲಿನ ಮೋಹ ಸುಮ್ಮನಿರಲು ಆಸ್ಪದವೀಯುತ್ತಿರಲಿಲ್ಲ. ನಮ್ಮ ಫಿಸಿಕ್ಸ್ ಲ್ಯಾಬ್‌ನ ಡೆಮಾನ್‌ಸ್ಟ್ರೇಟರ್‌ರ ಜವಾಬ್ದಾರಿಯಲ್ಲೇ ಕ್ಯಾಮೆರಾ ಇದ್ದುದರಿಂದ ಅವರನ್ನು ಕಾಡಿಬೇಡಿ ನಮ್ಮ ಹಳ್ಳಿಗೂ ತೆಗೆದುಕೊಂಡು ಹೋಗಿದ್ದೆ. ನಮ್ಮ ಪುಸ್ಸಿ, ಟಾಮಿ, ಶ್ಯಾಮು(ಎಮ್ಮೆಕರು), ಗದ್ದೆ, ನಮ್ಮೂರ ಹೊಳೆಗಳೆಲ್ಲದರ ಫೋಟೋ ತೆಗೆದದ್ದೇ ತೆಗೆದದ್ದು. ನಾನು ಹೋದಲ್ಲೆಲ್ಲಾ ನಮ್ಮ ಹಳ್ಳಿಯ ಮಕ್ಕಳು ಹಿಂಬಾಲಿಸುತ್ತಾ, 'ಪಟ ತೆಗೀತಾರೆ!' ಎನ್ನುತ್ತಾ ಕಣ್ಣುಬಾಯಿ ತೆರೆದುಕೊಂಡು ನನ್ನೇ ನೋಡುತ್ತಿದ್ದವು. ನಾನು ಅವರ ಪಾಲಿನ ಜಾದುಗಾರಳಾಗಿದ್ದೆ. ಆದರೆ ಈಗಿನಂತೆ ಮನಸ್ಸಿಗೆ ಬಂದಂತೆ ಫೋಟೋಗಳನ್ನು ತೆಗೆಯುವಂತಿರಲಿಲ್ಲ. ಒಂದು ಸಾರಿ ರೀಲ್ ಹಾಕಿದರೆ ಆ ಕ್ಯಾಮೆರಾದರಲ್ಲಿ ಹದಿನೈದು ಫೋಟೋ ಮಾತ್ರ ತೆಗೆಯಬಹುದಿತ್ತು. ರೀಲ್ ತೆಗೆಯುವಾಗ ಸ್ವಲ್ಪ ಯಾಮಾರಿದರೂ ಎಕ್ಸ್‌ಪೋಸ್ ಆಗಿ ಒಂದು ಫೋಟೋನೂ ಬರುತ್ತಿರಲಿಲ್ಲ. ನಂತರ ರೀಲನ್ನು ಪ್ರಿಂಟ್ ಹಾಕಿಸಲು ಸ್ಟುಡಿಯೋಗೇ ಕೊಡಬೇಕು 'ಪರರ ವಸ್ತು ಪಾಷಾಣ' ಎನ್ನುವ ತತ್ವದ ಹಿರಿಯರಿಗೆ ಬೆಲೆಬಾಳುವ ವಸ್ತುವನ್ನು ಎರವಲು ತಂದಿದ್ದಾಳೆನ್ನುವ ಅಸಮಾಧಾನ. ಏನಿದ್ದರೂ ಎರವಲು ಎರವಲೇ. ಸ್ವಂತ ಕ್ಯಾಮೆರಾದ ಹಂಬಲ ನನ್ನನ್ನು ತೀವ್ರವಾಗಿ ಕಾಡುತ್ತಲೇ ಇತ್ತು. ನನ್ನ ಯಾವುದೇ ಆಸೆ, ಹೆಚ್ಚುವರಿ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ನಾನು ಆರ್ಜಿಸಬಹುದಾದ ಮೊದಲ ತಿಂಗಳ ಸಂಬಳಕ್ಕಾಗೇ ಕಾಯಬೇಕಿತ್ತು. ಅದಕ್ಕಾಗಿ ಬೇಗ ನನ್ನ ಓದನ್ನು ಸಮಾಪ್ತಿಗೊಳಿಸಿ ಕೆಲಸಕ್ಕೆ ಸೇರಬೇಕಿತ್ತು. ನಮ್ಮ ಪ್ರೊಫೆಸರ್‌ಗಳೆಲ್ಲಾ ತಮ್ಮ ಹೆಸರುಗಳ ಹಿಂದೆ 'ಡಾಕ್ಟರ್' ಎಂದೂ ಮುಂದೆ ಪಿ.ಎಚ್‌ಡಿ ಎಂದೂ ಬರೆದುಕೊಳ್ಳುತ್ತಿದ್ದುದರಿಂದಲೋ ಅಥವಾ ನನ್ನ ಹೆಸರಿನ ಹ್ರಸ್ವ ಪಿಎಚ್‌ಡಿ ಎಂದೇ ಇದ್ದುದರಿಂದಲೋ ನನಗೂ ಪಿಎಚ್‌ಡಿ ಮಾಡಬೇಕೆಂಬ ತೀವ್ರ ಆಸೆಯಿತ್ತು. ನನ್ನ ಡಿಗ್ರಿ ಓದಿನ ನಾಲ್ಕು ವರ್ಷಗಳ ಅವಧಿಯಲ್ಲಿಯೂ ಅದನ್ನು ಬಹಳವಾಗಿ ಪೋಷಿಸಿಕೊಂಡು ಬಂದಿದ್ದೆ. ಪೂರ್ವ ತಯಾರಿಯೆಂಬಂತೆ ಲಭ್ಯ ಕಾಲಾವಧಿಯಲ್ಲೆಲ್ಲಾ ಗ್ರಂಥಾಲಯದಲ್ಲೇ ಬೀಡುಬಿಟ್ಟಿರುತ್ತಿದ್ದೆ. ಹಾಸ್ಟೆಲ್‌ನ ರಿಜಿಸ್ಟರ್‌ನಲ್ಲಿ ಸಹಿ ಮಾಡುವಾಗಲೂ ಪಿಎಚ್‌ಡಿ ಎಂದೇ ಮಾಡುತ್ತಿದ್ದೆ. ನನ್ನ ಎಡೆಬಿಡದ ಕ್ಯಾಮೆರಾ ಮೋಹ, 'ಸಾಕು ನೀನಿನ್ನು ಕಾಲೇಜಿಗೆ ಮಣ್ಣು ಹೊತ್ತಿದ್ದು. ಸ್ವಾವಲಂಬಿಯಾಗಿ ಬೇಗ ನನ್ನನ್ನು ತೂಗಿಹಾಕಿಕೋ' ಎಂದು ಕಾಡಲಾರಂಭಿಸಿತು. ಓದುವ ಆಸೆಯನ್ನು ಅಲ್ಲಿಗೇ ಮೊಟಕುಗೊಳಿಸಿ ಡಿಗ್ರಿಯ ರಿಸಲ್ಟ್ ಬರುವ ಮೊದಲೇ ಎಸ್‌ಎಸ್‌ಎಲ್‌ಸಿ ಅಂಕಗಳ ಆಧಾರದ ಮೇಲೆ ಕೇಂದ್ರ ಸರಕಾರಿ ನೌಕರಿಯೊಂದಕ್ಕೆ ಸೇರಿಯೇ ಬಿಡುವಂತೆ ಮಾಡಿದಳು ಈ ನನ್ನ ಮೋಹದ ಕಿನ್ನರಿ.

ಮೊದಲ ತಿಂಗಳ ವೇತನ ಕೈ ಸೇರುತ್ತಿದ್ದಂತೆಯೇ ಬಹುದಿನದ ಹರಕೆ ತೀರಿಸುವ ಭಕ್ತನಂತೆ ನನ್ನ ಪರಿಮಿತಿಯಲ್ಲಿಯೇ 100ರು. ಕೊಟ್ಟು ಒಂದು ಕ್ಲಿಕ್ ಥರ್ಡ್ ಕ್ಯಾಮೆರಾ ನನ್ನದಾಗಿಸಿಕೊಂಡೆ. ಅಂದಿನ ನನ್ನ ಸಡಗರ ವರ್ಣನೆಗೆ ನಿಲುಕದು. ಒಮ್ಮೆಗೆ ಹನ್ನೆರಡು ಫೋಟೋ ಮಾತ್ರ ತೆಗೆಯಬಹುದಿದ್ದ ಆ ನನ್ನ ಕನಸಿನ ಸಾಧನಕ್ಕೆ ಮತ್ತೆ ಮತ್ತೆ ರೀಲ್‌ಗಳನ್ನು ತುಂಬಿಸಿದೆ. ನನ್ನಿಂದ ತಮ್ಮ ಛಾಯಾಚಿತ್ರ ತೆಗೆಸಿಕೊಳ್ಳಲೇ ಕಾದಂತಿದ್ದ ನನ್ನ ಮುದ್ದಿನ ಪ್ರಾಣಿಗಳು, ದೃಶ್ಯಗಳೆಲ್ಲವನ್ನೂ ಕ್ಲಿಕ್ಕಿಸಿದೆ. ನನ್ನ ಸೋದರತ್ತೆಯೊಬ್ಬರು ಯಾರು ಏನಂತಾರೋ ಎಂದು ನಾಚಿಕೆಯಿಂದ ಹಿತ್ತಲಿಗೆ ಕರೆದುಕೊಂಡು ಹೋಗಿ ಯಾರಿಗೂ ಕಾಣದಂತೆ ಫೋಟೋ ತೆಗೆಸಿಕೊಳ್ಳುತ್ತಿದ್ದರು. ಆದರೆ ಹಿರಿಯ ಸೋದರತ್ತೆ ಮಾತ್ರ ಒಂದೇ ಒಂದು ಚಿತ್ರ ತೆಗೆಸಿಕೊಳ್ಳೆಂದು ಗೋಗರೆದರೂ ಒಪ್ಪಲಿಲ್ಲ. ಅವರ ಅನುಮತಿಯಿಲ್ಲದೇ ನಾನು ನನ್ನ ಬಿಂಬಗ್ರಾಹಿಯಿಂದ ಅವರ ಭಾವಚಿತ್ರ ತೆಗೆಯುವಂತೆಯೂ ಇರಲಿಲ್ಲ. ಅವರ ಮೊದಲ ಫೋಟೋವನ್ನು ತೆಗೆಯಲು ನನ್ನ ಎರಡನೆಯ ಫ್ಲ್ಯಾಷ್ ಕ್ಯಾಮೆರಾಗಾಗಿಯೇ ಕಾಯಬೇಕಾಯ್ತು. ಪೂರ್ವನಿಯೋಜನೆಯಂತೆ ನನ್ನ ಮಗುವಿನ ನಾಮಕರಣದ ದಿನ ಉಡುಪನ್ನು ಸರಿಪಡಿಸಿಕೊಳ್ಳುವ ನೆಪಮಾಡಿ ಎಳೆಯ ಕಂದನನ್ನು, 'ಸ್ವಲ್ಪ ಎತ್ತಿಕೊಂಡಿರು' ಎಂದು ಅತ್ತೆಯ ಕೈಗೆ ಕೊಟ್ಟು ಪಕ್ಕದಲ್ಲಿ ನಿಂತಾಗ ನನ್ನ ತಮ್ಮ ಅನಿರೀಕ್ಷಿತವಾಗಿ ಫೋಟೋ ಕ್ಲಿಕ್ಕಿಸಿಬಿಟ್ಟ! ಹಸುಕಂದನನ್ನು ಎತ್ತಿದ್ದ ಅತ್ತೆ ಮುಖ ಮರೆಸಿಕೊಂಡು ಓಡುವಂತೆ ಇರಲಿಲ್ಲ. ಈಗಲೂ ಆ ಚಿತ್ರ ನೋಡಿದಾಗ ಒಂದು ಕಾಲಕ್ಕೆ ಪರಮಸುಂದರಿಯಾಗಿದ್ದ ನನ್ನ ಅತ್ತೆಯ ವದನಾರವಿಂದದ ಮೇಲೆ ನಸುನಾಚಿಕೆಯಿಂದ ಕೂಡಿದ ಹುಸಿ ಮುನಿಸು ನಾಟ್ಯವಾಡುತ್ತಿದೆ ಎನಿಸುತ್ತದೆ.

ನಮ್ಮ ಸುತ್ತಿನ ಹಳ್ಳಿಗಳಲ್ಲೇ ಮೊದಲು ಡಿಗ್ರಿ ಓದಿದ ನನ್ನಕ್ಕ ಒಂದು ಹೊಸ ಕಾಲೇಜಿನ ಮೊದಲ ಬ್ಯಾಚಿನಲ್ಲಿ ಮೊದಲಿಗಳಾಗಿ ತೇರ್ಗಡೆ ಹೊಂದಿದ್ದರಿಂದ ಆ ನಗರದ ರೋಟರಿ ಕ್ಲಬ್‌ನವರು ಸನ್ಮಾನ ಮಾಡಿ ಕೊಟ್ಟಿದ್ದ ಒಂದು ಆಲ್ಬಂ ಚಿತ್ರಗಳನ್ನು ತುಂಬಿಸಿಕೊಳ್ಳಲೇ ಸಿದ್ಧವಿರುವಂತೆ ನಮ್ಮ ಮನೆಯ ಗೂಡೊಂದರಲ್ಲಿ ಕಾದು ಕುಳಿತಿತ್ತು. ನಾವೆಲ್ಲಾ ಸಂಭ್ರಮದಿಂದ ನನ್ನ ಕ್ಲಿಕ್ ಥರ್ಡ್ ಕ್ಯಾಮೆರಾದಿಂದ ತೆಗೆದ ಪುಟ್ಟಪುಟ್ಟ ಕಪ್ಪುಬಿಳುಪು ಚಿತ್ರಗಳಿಂದ ಆ ಆಲ್ಬಂನ ಹಸಿದ ಒಡಲೊಳಗೆಲ್ಲಾ ಹಸನಾಗಿ ಸಿಂಗರಿಸಿದೆವು. ಈಗಲೂ ನಮ್ಮ ನೆನಪುಗಳ ಪ್ರಥಮ ದಾಖಲೀಕರಣವಾದ ಆ ಆಲ್ಬಂ ತೆರೆದು ನೋಡುವುವಾಗ ಯಾವುದೋ ಕನಸಿನ ಲೋಕದೊಳಗೆ ಜಾರಿಹೋದಂತಾಗುತ್ತದೆ.

ನನ್ನ ಛಾಯಾಚಿತ್ರಗ್ರಹಣ ಚಾತುರ್ಯ ಪ್ರದರ್ಶನ ಬಿಸಿಲನ್ನೇ ಆಧರಿಸಿದ್ದುದು ಸ್ವಾಭಾವಿಕ ಚಿತ್ರ ವೈವಿಧ್ಯಗಳನ್ನು ಸೆರೆಹಿಡಿಯಲು ಬಹಳ ದೊಡ್ಡ ತಡೆಯಾಗಿತ್ತು. ಒಮ್ಮೆ ನನ್ನ ಅಣ್ಣನ ಐದು ವರ್ಷದ ಮಗ ಪಿಳ್ಳುಗುದ್ದಲಿ ಹಿಡಿದು ಬಹಳ ಹಿರಿಯನಂತೆ ಹಿತ್ತಲಲ್ಲಿ ಗಿಡಗಳಿಗೆ ಪಾತಿ ಮಾಡುವಂತೆ ಕೆತ್ತುತ್ತಿದ್ದಾಗ ಅವನಿಗೆ ಕಾಣದಂತೆ ಬೇಗ ಕ್ಯಾಮೆರಾ ತಂದು ಇನ್ನೇನು ಫೋಕಸ್ ಮಾಡಬೇಕೆನ್ನುವಾಗ ಪಿಳ್ಳುಗುದ್ದಲಿಯನ್ನು ದೂರ ಎಸೆದು ಕೈಗಳನ್ನು ನೇರವಾಗಿಸಿಕೊಂಡು ಅಟೆನ್ಷನ್ ಪೊಜಿಷನ್‌ನಲ್ಲಿ ನಿಂತುಬಿಟ್ಟ. ಸ್ಟುಡಿಯೋದಲ್ಲಿ ಇತ್ತೀಚೆಗೆ ಅವನ ಫೋಟೋ ತೆಗೆಸಿದ್ದರು. ಆಗ ಪೋಸ್ ಕೊಟ್ಟಿದ್ದರ ಪ್ರಭಾವವಿರಬಹುದು. ಅಂತೂ ನನ್ನ ಕ್ಯಾಮೆರಾ ನನ್ನನ್ನು ಕ್ಯಾಂಡಿಡ್ ಫೋಟೋಗ್ರಾಫರ್ ಆಗಲು ಆಸ್ಪದವೀಯುತ್ತಿರಲಿಲ್ಲ.

ಪಟ್ಟಣವೊಂದರಲ್ಲಿದ್ದ ಪತಿಗೃಹವನ್ನು ಪ್ರಥಮಬಾರಿಗೆ ಪ್ರವೇಶಿಸಿದಾಗ ಅವರ ಮನೆಯ ದೊಡ್ಡ ಹಜಾರದ ಗೋಡೆಯ ಮೇಲೆಲ್ಲಾ ಅಲಂಕರಿಸಿದ್ದ ನವವಿವಾಹಿತರ ಸಾಲುಸಾಲು ಫೋಟೋಗಳನ್ನು ನೋಡಿ ಆಶ್ಚರ್ಯಚಕಿತಳಾಗಿದ್ದೆ. ಮದುವೆಯಾದ ತಕ್ಷಣ ಆ ಕುಟುಂಬದ ಮೊದಲ ಕಾರ್ಯಕ್ರಮವೆಂದರೆ ನವದಂಪತಿ ಸಮೀಪದ ನಗರದಲ್ಲಿದ್ದ ಒಂದು ಪ್ರಸಿದ್ಧ ಸ್ಟುಡಿಯೋಗೆ ಹೋಗಿ ಕಪ್ಪುಬಿಳುಪಿನ ಪಾಸ್‌ಪೋರ್ಟ್ ಫೋಟೋ ತೆಗೆಸಿಕೊಳ್ಳುವುದು ಹಾಗೂ ಆ ಗೋಡೆಯ ಮೇಲೆ ತೂಗಿಹಾಕುವುದು. ನನಗೆ ಆ ಕ್ಷಣದಲ್ಲಿ ಮನೆಯ ಗೋಡೆಗಳ ಮೇಲೆ ರಾರಾಜಿಸುತ್ತಿದ್ದ ಮಗಳು-ಅಳಿಯ, ಮಗ-ಸೊಸೆ, ಅಪ್ಪ-ಅಮ್ಮ, ಅಜ್ಜಿ-ತಾತ ಮುಂತಾದವರ ಚಿತ್ರಗಳು ಆ ಸಂಸಾರದ ನಾಗರಿಕ ಪ್ರಜ್ಞೆಯ ದ್ಯೋತಕವೆನಿಸಿತು. ನಾವೂ ಮರುದಿನವೇ ನಗರದ ಆ ಮಹಾನ್ ಸ್ಟುಡಿಯೋಗೆ ಹೊರಡುವ ಕಾರ್ಯಕ್ರಮ ನಿಗದಿಯಾಯಿತು. ಫೋಟೋ ಬಂದಾಗ ನನ್ನವರಿಗೂ ನಗಲು ಬರುತ್ತದೆ ಎನ್ನುವುದು ತಿಳಿಯಿತು. (ಕ್ರಮೇಣ ಕ್ಯಾಮೆರಾದ ಎದುರಿಗೆ ಮಾತ್ರ ನಗು ಮೀಸಲೆನ್ನುವುದು ಖಾತ್ರಿಯಾಯಿತು!) ವೀಕ್ ಎಂಡ್ ವಿತ್ ರಮೇಶ್ ಕಾರ್ಯಕ್ರಮದ ಅಂತಿಮ ಘಟ್ಟದಂತೆ ಹಿರಿಜೋಡಿಗಳ ಚಿತ್ರಗಳ ಮೆರವಣಿಗೆಯಲ್ಲಿ ನಮ್ಮ ಚಿತ್ರವೂ ಪಾಲ್ಗೊಂಡಿತು. ಈಗ ಎಲ್ಲರೂ ತಮ್ಮತಮ್ಮ ಜೀವನವನ್ನರಸುತ್ತಾ ಪರ ಊರುಗಳನ್ನು ಸೇರಿ, ಮನೆಯೂ ಪರರ ಸ್ವಾಮ್ಯಕ್ಕೆ ಒಳಪಟ್ಟು ಗೋಡೆಯ ಮೇಲೆ ದಿಬ್ಬಣ ಹೊರಟಂತಿದ್ದ ಪಟಗಳೆಲ್ಲಾ ದಿಕ್ಕಾಪಾಲಾಗಿ ತಮ್ಮ ತಮ್ಮ ರೂಪದರ್ಶಿಗಳ ಗೂಡು ಸೇರಿವೆ. ನಮ್ಮ ಪಟವೂ ಕಳೆದ ದಿನಗಳನ್ನು ನೆನಪಿಸುತ್ತಾ ಶೋಕೇಸ್‌ನಲ್ಲಿ ಬೆಚ್ಚಗೆ ಕುಳಿತಿದೆ. ಒಮ್ಮೆ ನಗರದಲ್ಲಿ ಆ ಸ್ಟುಡಿಯೋಗಾಗಿ ವ್ಯರ್ಥ ಶೋಧ ನಡೆಸಿದೆ. ಹಳೆಯ ತಲೆಮಾರಿನ ನವಜೋಡಿಗಳ ಚಿತ್ರಗಳನ್ನು ದಾಖಲಿಸುತ್ತಿದ್ದ ಆ ಸ್ಟುಡಿಯೋ ಜಾಗದಲ್ಲಿ ಬೇರೊಂದು ಕಟ್ಟಡ ತಲೆಯೆತ್ತಿರುವುದು ಕಂಡುಬಂದಿತು.

ಒಂದು ರೀತಿಯಲ್ಲಿ ಶ್ರಮದಾಯಕ ಹಾಗೂ ಆಗಿನ ನನ್ನ ಪರಿಮಿತಿಯಲ್ಲಿ ಹೆಚ್ಚು ಖರ್ಚುಕರವಾಗಿದ್ದರೂ ಫೋಟೋ ಹವ್ಯಾಸವನ್ನು ಜತನವಾಗೇ ಕಾಪಿಟ್ಟುಕೊಂಡು ಬಂದಿದ್ದೆ. ವಿಜ್ಞಾನ, ತಂತ್ರಜ್ಞಾನಗಳ ಅಪರಿಮಿತ ಸಾಧನೆಗಳ ಪರಿಣಾಮವಾಗಿ ಮೊಬೈಲ್ ಎಂಬ ಮಾಯಾ ಸುಂದರಿ ಎಲ್ಲರ ಕರಸ್ಥಳಗಳಲ್ಲಿ ಕೂರಲಾರಂಭಿಸಿದಳು. ನಮ್ಮ ಮನೆಗೂ ಕಾಲಿಟ್ಟ ಆ ಚಂಚಲ ಕನ್ನಿಕೆ ತನ್ನೊಡನೆ ಕರೆತಂದ ಫ್ಲ್ಯಾಷ್ ಸುಂದರಿ ನನ್ನ ಎರಡನೇ ಪ್ರಿಯಸಖಿಯಾದಳು. ಮಕ್ಕಳು, 'ಈಗ ಡಿಜಿಟಲ್ ಕ್ಯಾಮೆರಾಗಳು ಎಷ್ಟೊಂದು ಚೆನ್ನಾಗಿರೋವು ಬಂದಿವೆ. ಇನ್ನೂ ರೀಲ್ ಹಾಕ್ಕೊಂಡು ಎಣಿಸಿಕೊಂಡು ಫೋಟೋ ತೆಗೆಯೋ ಜಮಾನದಲ್ಲೇ ಇರಬೇಕಾ?' ಎಂದು ಮತ್ತೊಬ್ಬ ಮಾಯಾಂಗನೆಯನ್ನು ಮನೆಗೆ ಕರೆತರುವ ಪೀಠಿಕೆ ಹಾಕಿದವು. ಮಕ್ಕಳ ಒತ್ತಡ ಮೇರೆ ಮೀರಿದಾಗ, 'ದೃಶ್ಯಗಳನ್ನು ಕಣ್ಣಿನಲ್ಲಿ ಸೆರೆ ಹಿಡಿದು ಮನಸ್ಸಿನಲ್ಲಿ ಜೋಪಾನ ಮಾಡಿಕೋಬೇಕು' ಎನ್ನುವ ನನ್ನದಲ್ಲದ ಮಾತನಾಡಿಬಿಟ್ಟೆ! ನನ್ನ ಆರ್ಥಿಕ ಸ್ಥಿತಿಯೇ ಈ ಮಾತನಾಡಿಸಿರಲೂಬಹುದು. ಆದರೆ ಆ ನನ್ನ ಅಭಾವವೈರಾಗ್ಯ ಅಲ್ಪಾಯುವಾಯ್ತು. ಪರಿಣಾಮ ಡಿಜಿಟಲ್ ಕೋಮಲೆಯ ಆಗಮನವಾಯಿತು. ಮನೆಯೊಳಗೆ ಸಾಲುಸಾಲಾಗಿ ಪ್ರವೇಶಿಸಿದ ಆ್ಯಂಡ್ರಾಯ್ಡ್ ಮೊಬೈಲ್‌ಗಳ ಕಣ್ಣು ಕೋರೈಸುವ ಪ್ರಖರ ಪ್ರಭೆಯಲ್ಲಿ ಕ್ಯಾಮೆರಾಗಳ ಹಣತೆಯ ಬೆಳಕು ಮಸುಕಾಯಿತು. ಇತ್ತೀಚಿಗೆ ಇವಕ್ಕೆ ಸರಿಸಾಟಿಯಾದ ಸೊಫೆಸ್ಟಿಕೇಟೆಡ್ ಕ್ಯಾಮೆರಾ ಮಕ್ಕಳ ಸ್ವಾಮ್ಯದಲ್ಲಿ ಮನೆಯಲ್ಲಿ ಸ್ಥಿರಸ್ಥಾಯಿಯಾಗಿದೆ. ಈಗ ಬೇಕೆಂದಾಗ ಎಲ್ಲೆಂದರಲ್ಲಿ ಫೋಟೋ, ಸೆಲ್ಫಿ, ವಿಡಿಯೋಗಳನ್ನು ಎಲ್ಲರಂತೆ ನನ್ನ ಮೊಬೈಲ್‌ನಿಂದಲೇ ತೆಗೆದು ಫೇಸ್‌ಬುಕ್, ಇನ್ಸ್ಟಾಗ್ರಾಮ್‌ಗಳಲ್ಲಿ ಹಾಕುತ್ತಿರುತ್ತೇನೆ. ವಾಟ್ಸ್ಯಾಪ್‌ನಲ್ಲೂ ಓಡಾಡಿಸುತ್ತಿರುತ್ತೇನೆ. ಆದರೂ ನನ್ನ ಮೊದಲ ತೊದಲು ನುಡಿಯಷ್ಟೇ ಅಪ್ಯಾಯಮಾನವಾದ ನನ್ನ ಕ್ಲಿಕ್‌ಥರ್ಡ್‌ನ ಸ್ಥಾನವನ್ನು ನನ್ನ ಹೃದಯದಿಂದ ಈ ಯಾವುದರಿಂದಲೂ ಕಸಿಯಲಾಗಿಲ್ಲ.

ರೂಪಶ್ರೀ ಕಲ್ಲಿಗನೂರು

ಬೆಕ್ಕು ನನಗೆ ಖಳನಾಯಕಿಯಾದ ಕಥೆ

ಭವ್ಯ ಬೊಳ್ಳೂರು

ಬಾಣಂತಿ ಅಮ್ಮ ಬೆಕ್ಕು ತನ್ನ ಮರಿಗಳೊಂದಿಗೆ ನನ್ನ ಪುಸ್ತಕ ಲೋಕವನ್ನೇ ಹಾಸಿಗೆ ಮಾಡಿಕೊಂಡು ಹಾಯಾಗಿ ಸಂಸಾರ ಹೂಡಿತ್ತು. ನನ್ನ ಪುಸ್ತಕಗಳೋ ಚಿಂದಿ ಚಿತ್ರಾನ್ನವಾಗಿದ್ದವು.



ಮಾರ್ಜಾಲ ಮೋಹ

ನಿಮ್ಮ ಪ್ರೀತಿಯ ಬೆಕ್ಕಿನ ಕುರಿತು ಹಂಚಿಕೊಳ್ಳಿ

ಪರೀಕ್ಷೆಗಳು ಮುಗಿದ ತಕ್ಷಣ ಪುಸ್ತಕಗಳು ಅಟ್ಟಕ್ಕೇರುತಿದ್ದವು. ಹಳೆಯ ರಟ್ಟಿನ ಪೆಟ್ಟಿಗೆಯಲ್ಲಿ ಎಲ್ಲಾ ಪುಸ್ತಕಗಳನ್ನು ಪೇರಿಸಿಡಲಾಗುತಿತ್ತು. ನನ್ನ ಅಕ್ಕನ ಹಾಗೂ ತಮ್ಮನ ಎರಡರಿಂದ ಮೂರು ವರ್ಷದ ಪುಸ್ತಕಗಳನ್ನು ತನ್ನ ಹೊಟ್ಟೆಯಲ್ಲಿ ತುಂಬಿಕೊಂಡ ಪೆಟ್ಟಿಗೆ ಕಿತ್ತು ಹೋಗಲು ಸಿದ್ಧವಾಗಿತ್ತು. ಇದರ ಜತೆಗೆ ಹಳೆಯ ತರಂಗ, ತುಷಾರ, ಮಯೂರ, ಚಂದಮಾಮ, ಬಾಲಮಿತ್ರಗಳಿಗೂ ಅದೇ ವಾಸಸ್ಥಾನ. ನನಗೆ ಹಳೆಯ ಪುಸ್ತಕಗಳ ಮೇಲೆ ಏನೋ ಮೋಹ. ನೋಟ್‌ಬುಕ್ಕಿನ ಕೊನೆಯ ಹಾಳೆಯ ಮೇಲೆ ಗೀಚಿದ ಕವನಗಳನ್ನು ಮತ್ತೆ ಮತ್ತೆ ಓದುವಾಸೆ. ಪಠ್ಯ ಪುಸ್ತಕದಲ್ಲಿದ್ದ ಕೆಲವೊಂದು ಕಥೆಗಳು ನನ್ನನ್ನು ಆಗಾಗ ಸೆಳೆಯುತ್ತಿದ್ದವು. ಇನ್ನು ಹಳೆಯ ಪತ್ರಿಕೆಗಳಿಗೂ ನನಗೂ ಜನ್ಮ ಜನ್ಮಾಂತರದ ಅನುಬಂಧ. ಹೀಗಾಗಿ ರಜೆಯಲ್ಲಿ ಮಧ್ಯಾಹ್ನದ ಊಟದ ನಂತರ ಎಲ್ಲಾ ಸೊಂಪಾದ ನಿದ್ದೆಯಲ್ಲಿದ್ದರೆ ನನ್ನ ಸವಾರಿ ಅಟ್ಟಕ್ಕೆ ಹೊರಡುತಿತ್ತು. ಪುಸ್ತಕಗಳನ್ನು ತಿರುವುತ್ತಾ ನನ್ನನ್ನು ನಾ ಮರೆತು ಮುಳುಗಿ ಹೋಗುತ್ತಿದ್ದೆ.

ಆಗಷ್ಟೇ ಮಳೆಗಾಲ ಶುರುವಾಗಿತ್ತು. ಮಳೆರಾಯ ಕರಾವಳಿಯ ಹಳ್ಳಿ ಮನೆಯನ್ನು ಇನ್ನಷ್ಟು ತಂಪಾಗಿಸಿದ್ದ. ನಾವು ಸುಟ್ಟ ಹಪ್ಪಳ, ಹಲಸಿನ ಬೀಜ, ಗೇರುಬೀಜ, ಕಾಫಿ ಅಂತ ಮೈ ಬೆಚ್ಚಗೆ ಮಾಡಿಕೊಳ್ಳುತ್ತಿದ್ದರೆ ಪಾಪ ಪ್ರಾಣಿಗಳೇನು ಮಾಡಬೇಕು. ತಮಗೆಂದು ಹಾಸಿದ ಗೋಣಿ ತಾಟಿನ ಮೇಲೆ ಬೆಚ್ಚಗೆ ಮಲಗುವುದೇ ಸ್ವರ್ಗ ಸುಖ. ತುಂಬು ಗರ್ಭಿಣಿ ಬೆಕ್ಕು ಕಾಲು ಸುಟ್ಟ ಹಾಗೆ ಮನೆಯಲ್ಲೆಲ್ಲಾ ಮಿಯಾಂವ್ ಅಂತ ಓಡಾಡಿಕೊಂಡಿತ್ತು. ನಮ್ಮ ಕಣ್ಣಿಂದ ಮರೆಯಾಗಿ ತನ್ನ ಬಾಣಂತನಕ್ಕೊಂದು ಜಾಗ ಹುಡುಕುವ ಅನಿವಾರ್ಯತೆ ಅದರದ್ದು. ಒಂದು ದಿನ ಯಾರಿಗೂ ತಿಳಿಯದಂತೆ ಮರೆಯಾಗಿತ್ತು. ಕೆಲವು ದಿನ ಬೆಕ್ಕಿನ ಪತ್ತೆಯೇ ಇಲ್ಲ. ಅಮ್ಮನಂತೂ ಬೆಕ್ಕು ಕಾಣುತ್ತಿಲ್ಲ, ನಾಯಿ ಪಾಲಾಗಿದೆಯೋ ಏನೋ ಅಂತ ಗೊಣಗಾಡುತ್ತಿದ್ದರು. ಪ್ರಾಣಿಪ್ರಿಯ ತಮ್ಮ ಅದನ್ನು ಹುಡುಕಾಡಿದ್ದೇ ಹುಡುಕಾಡಿದ್ದು. ವಾರ ಕಳೆದು ಭಾನುವಾರ ನಾನು ಪುಸ್ತಕದ ಭೇಟಿಗೆಂದು ಅಟ್ಟ ಹತ್ತಿದಾಗಲೇ ತಿಳಿಯಿತು, ಬಾಣಂತಿ ಅಮ್ಮಬೆಕ್ಕು ತನ್ನ ಮರಿಗಳೊಂದಿಗೆ ನನ್ನ ಪುಸ್ತಕ ಲೋಕವನ್ನೇ ಹಾಸಿಗೆ ಮಾಡಿಕೊಂಡು ಹಾಯಾಗಿ ಸಂಸಾರ ಹೂಡಿದೆಯೆಂಬ ಸಂಗತಿ. ನನ್ನ ಪುಸ್ತಕಗಳೋ ಚಿಂದಿ ಚಿತ್ರಾನ್ನವಾಗಿದ್ದವು. ಅವುಗಳ ಪಳೆಯುಳಿಕೆಗಳಷ್ಟೇ ಉಳಿದುಕೊಂಡಿದ್ದವು. ಅವುಗಳನ್ನು ಅಲ್ಲಿಂದ ಓಡಿಸುವಂತಿಲ್ಲ, ಬಿಡುವಂತಿಲ್ಲ. ಕೊನೆಗೆ ದೊಡ್ಡ ಮನಸ್ಸು ಮಾಡಿ ಆ ಪೆಟ್ಟಿಗೆಯನ್ನೇ ಬೆಕ್ಕಿಗೆ ದಾನ ಮಾಡಿ ಬಿಟ್ಟೆ. ಆದರೂ ನನ್ನ ಪುಸ್ತಕ ಪ್ರಪಂಚಕ್ಕೆ ದಾಳಿ ಇಟ್ಟ ಆ ಮಾರ್ಜಾಲ ಸಂಸಾರವನ್ನಂತೂ ಮರೆಯಲು ಸಾಧ್ಯವಿಲ್ಲ. ಅಲ್ಲಿಂದೀಚೆಗೆ ನನ್ನ ಮನಸ್ಸು ಯಾಕೋ ಬೆಕ್ಕುಗಳನ್ನು ಕಂಡರೆ ದೂರವಿರುತ್ತಿತ್ತು.

ನಾನು ಹೀಗಿದ್ದರೆ ನನ್ನ ತಮ್ಮ ತದ್ವಿರುದ್ಧ. ಆತನಿಗೋ ಪ್ರಾಣಿಗಳೆಂದರೆ ಮಹಾನ್ ಪ್ರೀತಿ. ಮನೆಯಲ್ಲೊಂದು ಬೆಕ್ಕು ಇರಲೇಬೇಕು, ಅದು ಹೆಣ್ಣು ಬೆಕ್ಕೇ ಆಗಿರಬೇಕು ಅನ್ನುವುದು ಹಿಂದಿನಿಂದಲೂ ನಮ್ಮ ಮನೆಯಲ್ಲಿ ನಡೆದುಕೊಂಡು ಬಂದ ಪದ್ಧತಿ. ಮನೆಯಲ್ಲಿದ್ದ ಬೆಕ್ಕು ಸತ್ತ ಮೇಲೆ ನಮ್ಮ ಮನೆ ಬೆಕ್ಕಿನ ತಲೆಮಾರಿನದ್ದೇ ಆದ ಮರಿಯನ್ನು ಸಂಬಂಧಿಕರ ಮನೆಯಿಂದ ತಂದು ಸಾಕಿದ್ದೆವು. ಯಾವಾಗಲೂ ಮುದ್ದಿಸುವ ನನ್ನ ತಮ್ಮನನ್ನು ಕಂಡರೆ ಅದಕ್ಕೂ ಅಗಾಧ ಪ್ರೀತಿ. ಅನ್ನ, ಹಾಲು ಹಾಕಲು ಅವನೇ ಆಗಬೇಕು. ತಮ್ಮ ಶಾಲೆ ಬಿಟ್ಟು ಬಂದ ತಕ್ಷಣ ಹೆಗಲೇರಿಬಿಡುತ್ತಿತ್ತು. ಸೋಫಾದಲ್ಲಿ ಕಾಲು ಚಾಚಿ ಮಲಗಿದರೆ ಅವನ ಮೇಲೆ ಅದರ ಸವಾರಿ. ರಾತ್ರಿ ಮಲಗಿದಾಗ ಚಾದರದೊಳಗೆ ನುಸುಳಿ ಬೆಚ್ಚನೆ ಮಲಗಿ ಬಿಡುತ್ತಿತ್ತು.

ಒಂದೆರಡು ದಿನ ತಮ್ಮ ಊರಲ್ಲಿಲ್ಲದಿದ್ದರೆ ಅಟ್ಟಬಿಟ್ಟು ಕೆಳಗೆ ಇಳಿಯುತ್ತಿರಲಿಲ್ಲ. ಹಾಲು, ಅನ್ನ ತಿನ್ನದೆ ಉಪವಾಸ ಸತ್ಯಾಗ್ರಹವನ್ನೇ ಮಾಡುತ್ತಿತ್ತು. ತಮ್ಮ ಬಂದಾಗಲೇ ಅನ್ನ ಅದರ ಹೊಟ್ಟೆ ಸೇರುವುದು. ಖುಷಿಯಿಂದ ಮನೆ ತುಂಬಾ ಅದರ ಓಡಾಟ. ಇವರಿಬ್ಬರ ಬಾಂಧವ್ಯ ಇಷ್ಟರ ಮಟ್ಟಿಗೆ ಇದ್ದರೂ ನನ್ನ ಮನಸ್ಸನ್ನಂತೂ ಬೆಕ್ಕಿಗೆ ಒಲಿಸಿಕೊಳ್ಳಲಾಗಲಿಲ್ಲ. ದೂರದಿಂದ ಅದರ ಆಟ ನೋಡಿ ಖುಷಿ ಪಡುತ್ತಿದ್ದೆ. ಮುದ್ದಿಸುವ ಮನಸ್ಸೆಂದೂ ಬರಲೇ ಇಲ್ಲ. ಬೆಕ್ಕೆಂದರೆ ನನ್ನ ನೆಚ್ಚಿನ ಪುಸ್ತಕಗಳನ್ನು ನಾಶ ಮಾಡಿದ ಖಳ ನಾಯಕಿಯೆನ್ನುವ ಭಾವನೆ ಮನದಲ್ಲಿ ಉಳಿದುಬಿಟ್ಟಿತ್ತು.

ತಂಗಳು ಮೆಸೇಜ್‌ಗಳ ತಿಂಗಳ ಪ್ರಸಾರ

e-ಮುಖ

ಆನ್‌ಲೈನ್ ಅನುಭವಗಳ ಅಂಕಣ

ಕ್ಷಮಾ ವಿ.ಭಾನುಪ್ರಕಾಶ್

ಬೆಳಗಿನ ತರಾತುರಿಯಲ್ಲಿ ಹೊರಟು ಬಸ್ ಹತ್ತಿದ ಮರುಕ್ಷಣ 'ಉಫ್' ಎಂದು ನಿಡುಸುಯ್ಯುತ್ತಾ, ಮೊಬೈಲ್ ತೆರೆದಾಗ ದಂಗಾಗಿ ಹೋದೆ. ವಾಟ್ಸ್ಯಾಪ್ ಗುಂಪುಗಳಲ್ಲಿ ಮತ್ತದೇ ವೈರಸ್‌ನ ಕಾರಣದಿಂದ 'ಎಟಿಎಂ ಬಂದ್' ಎಂಬ ಎಚ್ಚರಿಕೆಯ ಸಂದೇಶಗಳು. ಇದೊಳ್ಳೆ ಕಥೆ ಆಯ್ತಲ್ಲ, ವಾರಗಟ್ಲೇ ಎಟಿಎಂಗಳು ಮುಚ್ಚಿದ್ದು, ಇದೀಗ ಸಮಸ್ಯೆ ಬಗೆಹರಿದು, ಮತ್ತೆ ತೆರೆದು ಕೂತಿವೆ. ಪುನಾ ಬಂದ್ ಯಾಕೆ? ನನಗೋ ಯಾವುದೋ ತುರ್ತಿಗೆ ಹಣ ಡ್ರಾ ಮಾಡಲೇಬೇಕಿತ್ತು. ಏನಪ್ಪಾ ಕರ್ಮ ಅಂತ ನನ್ನ ಪತಿಗೆ ಕಾಲ್ ಮಾಡಿ, ಈ ವಿವರ ತಿಳಿಸಿ, ಬ್ಯಾಂಕ್‌ಗೆ ಹೋಗಲು ಸಾಧ್ಯವೇ ಎಂದಾಗ, ಅವರು ಕೂಲ್ ಆಗಿ, 'ಇದು ತಂಗಳು ಮೆಸೇಜ್‌ಗಳ ತಿಂಗಳ ಪ್ರಸಾರ ಅಷ್ಟೇ. ಡೋಂಟ್ ವರಿ' ಅಂದ್ರು. ನನಗೆ ಆ ಕ್ಷಣಕ್ಕೆ ನಿರಾಳವಾದ್ರೂ, ಈ ವಾಟ್ಸ್ಯಾಪ್ ಗುಂಪುಗಳ ಮೇಲೆ ಕೋಪ ಉಕ್ಕಿ ಬಂತು.

ಗೊತ್ತುಗುರಿ ಇಲ್ಲದ ಈ ಹಳೆ ಮೆಸೇಜ್‌ಗಳ ನಿರಂತರ ಓಡಾಟ, ಒಂದು ಗುಂಪು ತಪ್ಪಿದರೆ ಮತ್ತೊಂದರಲ್ಲಿ; ಈ ಗುಂಪುಗಳ ಸದಸ್ಯರು ಯಾರೇನೂ ತಿಳಿಯದವರಲ್ಲ. ಡಾಕ್ಟರ್‌ಗಳು, ಪೋಸ್ಟ್ ಗ್ರಾಜುಯೇಟ್‌ಗಳು, ವಿದ್ವಾಂಸರು, ಒಳ್ಳೆ ಮನಸ್ಸಿನವರು, ಮಗುವಿನಂತೆ ಕಿಟಲೆ ಮಾಡುವ ಸ್ವಭಾವದವರು, ಮಳೆ ನಿಂತರೂ ಮರದ ಹನಿ ನಿಲ್ಲದು ಎಂಬಂತೆ ಗುಂಪಿನ ಸದಸ್ಯರೆಲ್ಲರೂ ಸುಮ್ಮನಾದ ಬಳಿಕವೂ ಪುನರಾವರ್ತಿಸುವ ಸಂದೇಶ ಕಳಿಸುತ್ತಲೇ ಇರುವವರು, ಎಲ್ಲಾ ಮೆಸೇಜ್‌ಗಳನ್ನು ತಪ್ಪದೇ ಓದಿ ಒಂದಕ್ಕಾದರೂ ರಿಪ್ಲೈ ಮಾಡದೆ 'ರೀಡ್ ಒನ್ಲಿ ಮೋಡ್'ನಲ್ಲಿ ಇರುವವರು, ತಮ್ಮ ಮಕ್ಕಳ ಫೋಟೋ, ವಿಡಿಯೋ, ಆಟಾಟೋಪಗಳನ್ನು ಹಂಚಿಕೊಂಡು ಪ್ರತಿಕ್ರಿಯೆ ಬಯಸುವ ಆದರೆ ಬೇರೆಯವರ ಇಂತಹವೇ ಮೆಸೇಜ್‌ಗಳ ಕಡೆಗೆ ತಿರುಗಿಯೂ ನೋಡದವರು... ಹೀಗೆ ವಾಟ್ಸ್ಯಾಪ್ ಗುಂಪುಗಳ ಚಿತ್ರ ವಿಚಿತ್ರ ಸದಸ್ಯರ ಯಾದಿ ಹನುಮಂತನ ಬಾಲದಂತೆ.

ಕೆಲವು ಗುಂಪುಗಳ ಅಡ್ಮಿನ್‌ಗಳಿಗೆ ಅದೆಷ್ಟು ಕೃತಜ್ಞತೆ ಅರ್ಪಿಸಿದರೂ ಸಾಲದೆನಿಸುತ್ತದೆ. ಅಂಥ ಗುಂಪುಗಳೂ ಅಸ್ತಿತ್ವದಲ್ಲಿರುತ್ತವೆ; ಬರಹಗಾರರ ಬಳಗ, ವಿಜ್ಞಾನಾಸಕ್ತರ ಸಂಗಮ, ಬಂಧು ಬಾಂಧವರ ಗುಂಪು, ಶಾಲೆಯ ಸಹಪಾಠಿಗಳ ಗುಂಪು, ಕಾಲೇಜಿನ ಗೆಳೆಯ ಗೆಳತಿಯರ ಗುಂಪು ಇತ್ಯಾದಿ. ಭೌತಿಕವಾಗಿ ಭೇಟಿಯಾಗದೆಯೂ, ಗಾಳಿಯಲ್ಲಿ ತೇಲುವ ಸಂದೇಶಗಳ ಮೂಲಕ ವಿಚಾರ ವಿನಿಮಯಕ್ಕೆ ಇವು ಸಹಕಾರಿ. ಆದರೆ, ಹಲವಾರು ಬಾರಿ ವಾಟ್ಸ್ಯಾಪ್ ಗುಂಪುಗಳ ಸದಸ್ಯರಾಗಿರುವುದು ಪರಮ ಹಿಂಸೆ ಎನಿಸುವುದು ಸುಳ್ಳಲ್ಲ. ಆದರೆ, ಏನ್ಮಾಡೋಣ, ಕೆಲವೊಮ್ಮೆ ಗ್ರೂಪ್ ಅಡ್ಮಿನ್‌ನ ಕಾರಣದಿಂದ ಭಿಡೆಗೆ ಬಿದ್ದು, ಸದಸ್ಯತ್ವ ಮುಂದುವರೆಸಬೇಕಾಗಿ ಬರಬಹುದು. ಬೇಡದಿದ್ದರೂ ಕೆಲವೊಮ್ಮೆ ಶುಭೋದಯ, ಶುಭ ರಾತ್ರಿ ಎನ್ನಲೇಬೇಕಾಗಬಹುದು. ಅದೇನೊಂದು ಬಗೆಯ ತಲೆಬೇನೆಯೆಂದರೆ, ಮತ್ತೊಂದು ತಂಗಳು ನ್ಯೂಸ್, ಹಳೆಯ ಜೋಕ್, ಎಲ್ಲೋ ಸತ್ಯಾಂಶವಿರದ ಸಂದೇಶಗಳ ಪ್ರಸಾರದಲ್ಲಿ, ಕೆಲವರು, ಯಾರೋ ಕಳೆದು ಹೋದ ಮಗುವು ಮನೆಗೆ ತಲುಪಿದ ಮೇಲೂ, ಅವರು ಕಾಣೆಯಾದ ಪ್ರಕಟಣೆಯನ್ನು ಅತ್ಯಂತ ಮುತುವರ್ಜಿಯಿಂದ ಗುಂಪಿನಿಂದ ಗುಂಪಿಗೆ ಹರಿದಾಡಿಸುತ್ತಾರೆ. ಮತ್ತಾರೋ, ಯಾವುದೋ ಹಸುಗೂಸಿಗೆ ರಕ್ತದ ಪರಮ ಅವಶ್ಯಕತೆಯಿದೆ ಎಂಬ ಸುದ್ದಿಯನ್ನು ವರ್ಷಾನುಗಟ್ಟಲೆ ಒಬ್ಬರಿಂದ ಒಬ್ಬರಿಗೆ ಕಳಿಸುತ್ತಲೇ ಇರುತ್ತಾರೆ. ಇನ್ನು, ಈ ಸಂದೇಶವನ್ನು 15 ಜನರಿಗೆ ಈ ಕೂಡಲೇ ಕಳಿಸದಿದ್ದಲ್ಲಿ ದೇವರು ಕೋಪಗ್ರಸ್ತನಾಗಿ ನೀವು ಶಾಪಗ್ರಸ್ತರಾಗುತ್ತೀರಿ ಜೋಕೆ ಎಂಬಂತಹ ಬೆದರಿಕೆ ಒಡ್ಡುವ ಬೆದರುಬೊಂಬೆಗಳು ಮತ್ತೊಂದೆಡೆ. ದಿನಕ್ಕೊಂದಾದ್ರೂ ಸೆಲ್ಫಿ ಕಳಿಸದೇ, ವಾಟ್ಸ್ಯಾಪ್‌ನ ಡಿಪಿ ಬದಲಾಯಿಸದೆ ಇದ್ರೆ, ಊಹುಂ, ಸಮಾಧಾನವೇ ಇಲ್ಲ ಕೆಲವರಿಗೆ. ಮತ್ತೂ ಕೆಲವರು ಆಗಾಗ ಗುಂಪು ಬಿಟ್ಟು ಹೊರನಡೆಯುವುದು, ಮತ್ತೆ ಮತ್ತೆ ಸೇರಿಸುವಂತೆ ಅಡ್ಮಿನ್‌ಅನ್ನು ಗೋಗರೆಯುವುದು ನಡೆಯುತ್ತಿರುತ್ತದೆ.

ರೂಪಶ್ರೀ ಕಲ್ಲಿಗನೂರು

ಈ ವಾಟ್ಸ್ಯಾಪ್‌ಗಿಂತಲೂ ಒಂದು ಕೈ ಹೆಚ್ಚೇ ಫೇಮಸ್ ನಮ್ಮ ಫೇಸ್‌ಬುಕ್. ನನ್ನ ಪ್ರಕಾರ, ಈ ಫೇಸ್‌ಬುಕ್ ಅನ್ನೋದು ಒಂದು ಮಾಯಾಗನ್ನಡಿ. ಕೇವಲ ಸ್ಥಿತಪ್ರಜ್ಞರಿಗಷ್ಟೇ ಅದರ ಮೇಲೆ ಸವಾರಿ ಮಾಡಲು ಸಾಧ್ಯ. ಬೇರೆಯವರ ಬದುಕಿನ ರಂಗು ರಂಗಿನ ಚಿತ್ರಗಳಲ್ಲಿ ಕಂಡುಬರುವ ಸಂತೋಷವನ್ನು ಕಂಡು, ತಮ್ಮ ದೈನಂದಿನ ಕಾರ್ಪಣ್ಯಕ್ಕೆ ಅದನ್ನು ಹೋಲಿಸಿಕೊಂಡು ಕಣ್ಣೀರ್ಗರೆಯುವವರು, ಕರುಳೊಳಗೆ ಬೆಂಕಿ ಬಿದ್ದಂತೆ ಆಡುವವರೇ ಹೆಚ್ಚು ಎನ್ನುತ್ತದೆ ಒಂದು ಸಮೀಕ್ಷೆ. ಇನ್ನು 40-50ರ ವಯಸ್ಸಿನ ಜೀವನೋತ್ಸಾಹಿಗಳಿಗೆ, ಜೀವನದ ಸಾಗರದಲ್ಲಿ ಎಲ್ಲೋ ಕಳೆದುಹೋದ ತಮ್ಮ ಬಾಲ್ಯದ ಗೆಳೆಯ ಗೆಳತಿಯರನ್ನು ಮತ್ತೊಮ್ಮೆ ಫೇಸ್‌ಬುಕ್ ಅನ್ನೋ ಸೇತುವೆ ಬೆಸೆಯುತ್ತದೆ ಎನ್ನುವುದು ನನ್ನ ತಾಯಿಯ ಸ್ವಾನುಭವ ಆಧಾರಿತ ಅಂಬೋಣ.

ಫೇಸ್‌ಬುಕ್ ಅನ್ನೋದು ಟೈಮ್‌ಪಾಸ್ ಮಾಡಲು ಯುವಜನರಿಗೆ ಒಂದು ವೇದಿಕೆಯಷ್ಟೇ ಎಂದೂ ಮೂದಲಿಸುವವರು ಬಹಳಷ್ಟು ಜನ. ಆದರೆ, ಸಮಾನಮನಸ್ಕತೆಯ ಸರೋವರದಲ್ಲಿ ಹಾಯಿದೋಣಿಯ ಹುಟ್ಟಾಗಿ ಫೇಸ್‌ಬುಕ್ ಅನ್ನು ಬಳಸಿಕೊಳ್ಳುತ್ತಾ ಅರ್ಥಪೂರ್ಣ ಚರ್ಚೆಯ ವೇದಿಕೆ ಆಗಿಸಿಕೊಂಡವರೂ ಬಹಳಷ್ಟು ಮಂದಿ ಕಾಣಸಿಗುತ್ತಾರೆ. ಪರಿಸರ ಸಂರಕ್ಷಣೆಯಿಂದ ಹಿಡಿದು ಪಾಕಶಾಸ್ತ್ರದವರೆಗೆ, ಶಾಸ್ತ್ರೀಯ ಸಂಗೀತದಿಂದ ಹಿಡಿದು ವಿಜ್ಞಾನದವರೆಗೆ, ನೇಲ್‌ಆರ್ಟ್‌ನಿಂದ ಹಿಡಿದು ತಾರಸಿ ತೋಟದವರೆಗೆ ಫೇಸ್‌ಬುಕ್‌ನಲ್ಲಿ ಲಭ್ಯವಿರುವ ಮಾಹಿತಿಗೆ, ಸಂಬಂಧಿತ ಗುಂಪುಗಳಿಗೆ ಎಣೆಯೇ ಇಲ್ಲವೇನೋ. ಆದರೆ ಅದನ್ನು ಬಳಸಿಕೊಳ್ಳುವಲ್ಲಿ ನಮ್ಮ ಪ್ರಬುದ್ಧತೆ ಮುಖ್ಯವೆನಿಸುತ್ತದೆ. ಯಾವುದಾದರೂ ಸುದ್ದಿಯ ಸತ್ಯಾಸತ್ಯತೆ ತಿಳಿಯದೇನೇ ನಮ್ಮ ಫೇಸ್ಬುಕ್ ಗೋಡೆಯ ಮೇಲೆ ಅದನ್ನು ಹಂಚಿಕೊಳ್ಳುವುದು, ಯಾರದೋ ಚಿತ್ರದ ಬಗ್ಗೆ ಬೇಡದ್ದನ್ನು ಕಮೆಂಟಿಸುವುದು, ಸ್ವಾತಂತ್ರ್ಯದ ಹೆಸರಿನಲ್ಲಿ ಮನಬಂದಂತೆ ಫೇಸ್‌ಬುಕ್‌ನ ಗೋಡೆ ಮೇಲೆ ಗೀಚುವುದು [illegible] ನಾವು ತೊಡಗಿಸಿಕೊಳ್ಳದೆ ಇದ್ದಾಗ ಮಾತ್ರ, ನಾವು ನಿಜಾರ್ಥದಲ್ಲಿ ತಂತ್ರಜ್ಞಾನದ ಕೊಡುಗೆಗಳಾದ ಫೇಸ್‌ಬುಕ್, ವಾಟ್ಸ್ಯಾಪ್‌ನಂಥ ಸಾಮಾಜಿಕ ಕಾಮನಬಿಲ್ಲುಗಳ ಸದ್ಬಳಕೆ ಮಾಡಿಕೊಳ್ಳಬಹುದು.